# ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ನ್ಯಾಯಾಲಯ, ಕಾರವಾರ

ಸಿ.ಸಿ.ನಂಃ1845/2024

ಪಿ ಡಬ್ಲ್ಯೂಃ 01

| | |
|---|---|
| ಸಾಕ್ಷಿದಾರರ ಹೆಸರು | ಸುಜಯ ನಾಯಕ |
| ತಂದೆಯ ಹೆಸರು | ಸುರೇಶ ನಾಯಕ |
| ವಯಸ್ಸು | 46 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ್ತವ್ಯ | ನಂದನಗದ್ದಾ, ಕಾರವಾರ ತಾಲೂಕು. |

(ಇಂದು ದಿನಾಂಕಃ 24.03.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

ಮಾನ್ಯ ಸರ್ವೋಚ್ಚ ನ್ಯಾಯಾಲಯದ (2014) 5 ಎಸ್.ಸಿ.ಸಿ. 590-- ಇಂಡಿಯನ್ ಬ್ಯಾಂಕ್ಸ್ ಅಸೋಷಿಯೇಶನ್ ವಿರುದ್ಧ ಯುನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿನ ತೀರ್ಪನ್ನು ಆಧರಿಸಿ ಈ ಪ್ರಕರಣದಲ್ಲಿ ಪಿರ್ಯಾದುದಾರ ಪರ ವಕೀಲರು ಸಲ್ಲಿಸಿರುವ ಜ್ಞಾಪನವನ್ನು ಪರಿಗಣಿಸಿ, ಈ ಹಿಂದೆ ಪಿರ್ಯಾದುದಾರರು ತಮ್ಮ ಸ್ವ ಪ್ರತಿಜ್ಞಾ ಹೇಳಿಕೆಯ ಸಲುವಾಗಿ ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ಪಿರ್ಯಾದುದಾರರ ಪರ ಸಾಕ್ಷ್ಯವನ್ನಾಗಿ ಪರಿಗಣಿಸಲಾಯಿತು. ಈ ಪ್ರಕಣದಲ್ಲಿ ಸ್ವ ಪ್ರತಿಜ್ಞಾ ಹೇಳಿಕೆಯನ್ನು ದಾಖಲಿಸುವಾಗ ಪಿರ್ಯಾದಿಯೊಂದಿಗೆ ಸಲ್ಲಿಸಲಾದ ದಾಖಲೆಗಳನ್ನು ನಿಶಾನೆಗೊಳಿಸಿರದ ಕಾರಣ ಸದ್ರಿ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಗೊಳಿಸಲಾಯಿತು.

(1. ದಿಃ 12.11.2022 ರ ದಿ ಫೆಡರಲ್ ಬ್ಯಾಂಕ್ ಲಿ. ಕಾರವಾರ ಶಾಖೆಯ ನಂಬರ್ 058568 ರ ರೂ.1,80,000/- ದ ಚೆಕ್‌ನ್ನು ನಿಪಿ-1,

2. ಸಾಕ್ಷಿ ಸದರಿ ಚೆಕ್ ನಲ್ಲಿ ಕಾಣುವ ಸಹಿಯನ್ನು ನೋಡಿ ಅದು ಆರೋಪಿಯ ಸಹಿ ಎಂದು ಹೇಳಿದ್ದಕ್ಕೆ ಆರೋಪಿಯ ಸಹಿಯನ್ನು ನಿಪಿ-1 (ಎ),

3. ದಿಃ25.01.2023 ರ ಪೇಯಿಂಗ್ ಸ್ಲಿಪ್ ನ್ನು ನಿಪಿ-2,

4. ದಿಃ 27.01.2023 ರ ಚೆಕ್ ರಿಟರ್ನ ಮೆಮೋವನ್ನು ನಿಪಿ-3,

5. ದಿಃ 03.02.2023 ರ ವಕೀಲರ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ-4,

6. ಅಂಚೆ ರಶೀದಿಯನ್ನು ನಿಪಿ-5,

7. ದಿಃ 02.01.2021 ರ ಸಿಸಿ ನಂಬ್ರ 336/2015 ರ ತೀರ್ಪಿನ ದೃಡಿಕೃತ ಪ್ರತಿಯನ್ನು ನಿಪಿ-6 ಎಂದು ಗುರುತಿಸಲಾಯಿತು.)

**(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ.ದ.ನ್ಯಾದಂ., ಕಾರವಾರ